ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಸಿ3[1]ಪ್ರಾ.ಶಿ: ಅ.ಶಿ. ನೇ.01/2019-20 ದಿನಾಂಕ 27.06.2019

**ಜ್ಞಾಪನಾ**

ವಿಷಯ:- 2019-20 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ ಇಡಿ 228 ಪಿಬಿಎಸ್ 2018 ದಿನಾಂಕ 24.06.2019.
2) ಸರ್ಕಾರದ ಆದೇಶ ಇಡಿ 626ಪಿಬಿಎಸ್ 2014 ದಿನಾಂಕ 19/05/2017
3) ಸರ್ಕಾರದ ಆದೇಶ ಇಡಿ 626 ಪಿಬಿಎಸ್ 2014 ದಿನಾಂಕ 07/08/2017
4) ಈ ಕಛೇರಿ ಅಧಿಸೂಚನೆ ಸಂಖ್ಯೆ ಸಿ3(1)ಪ್ರಾಶಿ.ವೃಂದ ಬಲ. ಜಿಲ್ಲಾ. ಹಂ 2017-18. ದಿನಾಂಕ 02/02/2018
5) ಜಿಲ್ಲೆಗಳಿಂದ ಸ್ವೀಕೃತವಾದ ಅಂಕಿ-ಅಂಶಗಳು ಮತ್ತು ಟಿಡಿಎಸ್ ತಂತ್ರಾಂಶದಿಂದ ಪಡೆಯಲಾದ ಖಾಲಿ ಹುದ್ದೆಗಳ ವರದಿ ಮಾಹಿತಿ

* * * *

ಉಲ್ಲೇಖ-01 ರ ಆದೇಶನ್ವಯ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಮೇರೆಗೆ, ನೇರ ನೇಮಕಾತಿ ಮೂಲಕ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ಮಾರ್ಚ್ 2020 ರವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ, ಸರ್ಕಾರದ ಆದೇಶದಲ್ಲಿನ ಷರತ್ತುಗಳಿಗೆ ಒಳಪಡಿಸಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಖಾಲಿ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಒಟ್ಟು 22,150 ಅತಿಥಿ ಶಿಕ್ಷಕರನ್ನು ಅನುಬಂಧದಲ್ಲಿ ತೋರಿಸಿರುವಂತೆ ಜಿಲ್ಲಾವಾರು ಮಂಜೂರು ಮಾಡಿದೆ.

ಅದರಲ್ಲಿ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 10,565 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8) ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿರುವ ಹುದ್ದೆಗಳಿಗೆ ಶಿಕ್ಷಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ತನ್-ತಾನೆ ಅತಿಥಿ ಶಿಕ್ಷಕರ ನೇಮಕಾತಿ ರದ್ದಾಗುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ 10,565 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನೀಡಿರುವ ಅನುಮತಿ ಸಹ ಸೇರಿದೆ.

ಲೆಕ್ಕಶೀರ್ಷಿಕೆ 2515-00-197-1-10-300 (Lumpsum) ರಲ್ಲಿ ಕಾಯ್ದಿರಿಸಿ ಕೊಂಡಿರುವ ಅನುದಾನದಿಂದ ನೇರವಾಗಿ ತಾಲ್ಲೂಕುಗಳಿಗೆ ಬಿಡುಗಡೆಯಾಗುವ ಅನುದಾನದಿಂದ ಖರ್ಚು ಭರಿಸಲು ಸರ್ಕಾರದ ಆದೇಶ ಸಂಖ್ಯೆ ಇಡಿ 228 ಪಿಬಿಎಸ್ 2018 ದಿನಾಂಕ 24.06.2019 ರಲ್ಲಿ ಅನುಮತಿ ನೀಡಲಾಗಿದೆ. ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ.

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ವೃಂದ ಬಲ ನಿಗದಿಗೊಳಿಸಿರುವ ಸರ್ಕಾರದ ಆದೇಶದ ಕ್ರಮಗಳನ್ನು ಮತ್ತು ಇಲಾಖಾ ಅಧಿಸೂಚನೆಯಲ್ಲಿನ ಸೂಚನೆಗಳನ್ನು ಪಾಲಿಸಿ ಪ್ರತಿ ಶಾಲೆಗೆ ಅಗತ್ಯವಿರುವ ಶಿಕ್ಷಕರ ಹುದ್ದೆಗಳ ಕುರಿತಂತೆ, ಶಾಲಾವಾರು ವೃಂದ ಮಂಜೂರಾತಿ ಕ್ರಮಗಳನ್ನು ಈಗಾಗಲೇ ಜಿಲ್ಲಾ ಹಂತದಲ್ಲಿ ನಿಯಮಾನುಸಾರ ಕೈಗೊಳ್ಳಲಾಗಿರುತ್ತದೆ. ಸದರಿ ಆಧಾರದಲ್ಲಿ ಎಲ್ಲಿ ಅಗತ್ಯ ಖಾಲಿ ಹುದ್ದೆಗಳಿವೆಯೋ ಅಂತಹ ಖಾಲಿ ಹುದ್ದೆಗಳಲ್ಲಿ ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲು ಪ್ರಸ್ತುತ ಲಭ್ಯವಿರುವ ಖಾಲಿ ಹುದ್ದೆಗಳ ಮಾಹಿತಿಯನ್ನಾಧರಿಸಿ ಲಗತ್ತಿಸಲಾಗಿರುವ ಅನುಬಂಧದಲ್ಲಿರುವಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಪ್ರತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಕಸ್ಮಾತ್ ಏಕೋಪಾಧ್ಯಾಯ ಶಾಲೆಗಳಿದ್ದಲ್ಲಿ ಅಂತಹ ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಮಹಿಳಾ ಶಿಕ್ಷಕಿಯರ ಪ್ರಸೂತಿ ರಜೆ, ಗರ್ಭಪಾತ ರಜೆ, ಮತ್ತು ಇನ್ನಿತರೆ

ಕಾರಣಗಳಿಂದಾಗಿ ಧೀರ್ಘಕಾಲಿಕ ರಜೆಯ ಮೇಲೆ ತೆರಳುವ ಸಂದರ್ಭದಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು, ಪ್ರತಿ ತಾಲ್ಲೂಕಿಗೆ 02 ಸಂಖ್ಯೆಯಲ್ಲಿ ಬದಲಿ ಶಿಕ್ಷಕರನ್ನು (ರಿಸರ್ವ್ ಶಿಕ್ಷಕರು) ವ್ಯವಸ್ಥೆಗೊಳಿಸಲು ಸಹ ಅನುಮತಿ ನೀಡಿದೆ.

ಅಂತರಘಟಕ ವರ್ಗಾವಣೆ ತರುವಾಯದಲ್ಲಿ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯಲ್ಲಿ ಹೆಚ್ಚಳವಾದಲ್ಲಿ, ಹಂಚಿಕೆಯಾಗಿರುವ ಅತಿಥಿ ಶಿಕ್ಷಕರ ಸಂಖ್ಯೆಯಿಂದ ಹೆಚ್ಚುವರಿಯಾಗಿರುವ ಅತಿಥಿ ಶಿಕ್ಷಕರ ಹುದ್ದೆಗಳನ್ನು ಅಧ್ಯರ್ಪಿಸುವುದು. ಹಾಗೆಯೇ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯಲ್ಲಿ ಕಡಿಮೆಯಾದಲ್ಲಿ ಹಂಚಿಕೆಯಾಗಿರುವ ಅತಿಥಿ ಶಿಕ್ಷಕರ ಸಂಖ್ಯೆಯಲ್ಲಿಯೇ ಸದರಿ ಹುದ್ದೆಗಳಿಗೂ ಹೊಂದಾಣಿಕೆ ಮಾಡಿಕೊಳ್ಳುವುದು.

ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಆದೇಶದ ಕ್ರಮಗಳಂತೆ ಹಾಗೂ ಕೆಳಕಂಡ ಷರತ್ತುಗಳ ಮೇರೆಗೆ ಅನುಮತಿ ನೀಡಲಾಗಿದೆ.

1. ತಾಲ್ಲೂಕುವಾರು ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಲು, ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತುತ ಖಾಲಿ ಹುದ್ದೆಗಳ ಬೇಡಿಕೆಯನುಸಾರ ಅಗತ್ಯವಿರುವ ಹುದ್ದೆಗಳ ಸಂಖ್ಯೆಯನ್ನು ಹಂಚಿಕೆ ಮಾಡಲಾಗಿದ್ದು, ಖಾಲಿ ಇರುವ ಅಗತ್ಯ ಹುದ್ದೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ತ್ವರಿತವಾಗಿ ನೇಮಕಾತಿ ಮಾಡಲು ಅಗತ್ಯ ಕ್ರಮವಹಿಸುವುದು.
2. ಜಿಲ್ಲಾ ಉಪನಿರ್ದೇಶಕರುಗಳು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯಿಂದಾಗಿ ವಿದ್ಯಾರ್ಥಿಗಳ ಶಿಕ್ಷಕರ ಅನುಪಾತವನ್ನು ಗಮನಿಸಿ ಅತಿಥಿ ಶಿಕ್ಷಕರನ್ನು ಹಂಚಿಕೆಮಾಡುವುದು.
3. ಉಪನಿರ್ದೇಶಕರುಗಳು(ಆಡಳಿತ), ತಾಲ್ಲೂಕಿನಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾಲಿ ಹುದ್ದೆಗಳನ್ನು ಗುರ್ತಿಸಿ ದೃಢೀಕರಿಸಿದ ಮಾಹಿತಿಯನ್ನು ಆಧರಿಸಿ, ತಾಲ್ಲೂಕು/ವಲಯವಾರು ಅತಿಥಿ ಶಿಕ್ಷಕರನ್ನು ಹಂಚಿಕೆ ಮಾಡುವುದು. **ಹೀಗೆ ಹಂಚಿಕೆ ಮಾಡುವಾಗ, ಜಿಲ್ಲೆಗೆ ಹಂಚಿಕೆ ಮಾಡಲಾಗಿರುವ ಅತಿಥಿ ಶಿಕ್ಷಕರ ಹುದ್ದೆಗಳ ಸಂಖ್ಯೆ ಮೀರುವಂತಿಲ್ಲ.**
4. ತಾಲ್ಲೂಕುವಾರು ಹಂಚಿಕೆ ಮಾಡಿಲಾದ ಅತಿಥಿ ಶಿಕ್ಷಕರ ಹುದ್ದೆಗಳನ್ನು ಜಿಲ್ಲೆಯೊಳಗೆ ಬದಲಾವಣೆ ಮಾಡಿಕೊಂಡಲ್ಲಿ, ಮರು ಹಂಚಿಕೆಯಾದ ವಿವರಗಳ ಮಾಹಿತಿಯನ್ನು ಸಕಾಲದಲ್ಲಿ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. (ಕಳೆದ ಬಾರಿ ಕೆಲವೊಂದು ಜಿಲ್ಲೆಗಳಲ್ಲಿ ಅತಿಥಿ ಶಿಕ್ಷಕರ ಹುದ್ದೆಗಳನ್ನು ತಾಲ್ಲೂಕುವಾರು ಪದೇ ಪದೇ ಮರು ಹಂಚಿಕೆ ಮಾಡಿದ ಕಾರಣದಿಂದ, ಅನುದಾನದ ಬಿಡುಗಡೆಯಲ್ಲಿ ವ್ಯತ್ಯಾಸವಾಗಿ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ತೊಂದರೆಯಾಗಿರುವುದು ಈ ಕಛೇರಿಯ ಗಮನಕ್ಕೆ ಬಂದಿದ್ದು ಈ ವಿಷಯವನ್ನು ತೀವ್ರವಾಗಿ ಪರಿಗಣಿಸಲಾಗುವುದು ಈ ರೀತಿಯಾಗದಂತೆ ಎಚ್ಚರಿಕೆ ಸೂಚಿಸಿದೆ)
5. ಅಂತರ್ ಘಟಕ ವರ್ಗಾವಣೆ ಮುಖಾಂತರ ಶಿಕ್ಷಕರು ವರ್ಗಾವಣೆಗೊಂಡು ಜಿಲ್ಲೆಗಳಿಗೆ ಬರುವುದರಿಂದ ಅ ಶಾಲೆಯಲ್ಲಿನ ಅತಿಥಿ ಶಿಕ್ಷಕರನ್ನು ತಕ್ಷಣವೇ ಬಿಡುಗಡೆಗೊಳಿಸತಕ್ಕದ್ದು. ಈ ಷರತ್ತನ್ನು ಅತಿಥಿ ಶಿಕ್ಷಕರ ಆಯ್ಕೆ ಸಂದರ್ಭದಲ್ಲಿ ಗೊತ್ತುಮಾಡತಕ್ಕದ್ದು.
6. ಶಿಕ್ಷಕರ ಸಂಪನ್ಮೂಲವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಈ ಬಗ್ಗೆ ಸರ್ಕಾರಿ ಆದೇಶದ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರಿದ್ದಲ್ಲಿ ಅಂತಹ ಶಿಕ್ಷಕರನ್ನು ಕೊರತೆ ಇರುವ ಸರ್ಕಾರಿ ಶಾಲೆಗಳಿಗೆ (**O.O.D.**) ಆಧಾರದ ಮೇಲೆ ಕಡ್ಡಾಯವಾಗಿ ಹಂಚಿಕೆ ಮಾಡತಕ್ಕದ್ದು.
8. ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರುಗಳ ಮೂಲಕವೇ ಮಾಡುವುದು.
9. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರನ್ನು ಪ್ರಮುಖವಾಗಿ ಆದ್ಯತೆ ಮೇರೆಗೆ ಗ್ರಾಮೀಣ ಪ್ರದೇಶಗಳಲ್ಲಿ ನೇಮಿಸುವುದು.
10. ನೇಮಕಾತಿಗೆ ಅಧಿಸೂಚಿಸಿದ ಪ್ರಾಥಮಿಕ ಶಾಲಾ ಶಿಕ್ಷಕರು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾದ ತಕ್ಷಣ ಅತಿಥಿ ಶಿಕ್ಷಕರ ನೇಮಕಾತಿ ತಂತಾನೆ ರದ್ದಾಗುತ್ತದೆ.
11. ಅತಿಥಿ ಶಿಕ್ಷಕರನ್ನು ಆಯಾ ಹುದ್ದೆಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡತಕ್ಕದ್ದು.
12. ಅತಿಥಿ ಶಿಕ್ಷಕರ ಹಾಜರಾತಿ ವಹಿಯನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

13. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ಗೌರವ ಸಂಭಾವನೆ ಧನ ಮಾಹೆಯಾನ ರೂ 7500/- ಆಗಿರುತ್ತದೆ. ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಗೌರವ ಧನವನ್ನು ಲೆಕ್ಕಶೀರ್ಷಿಕೆ 2515-00-197-1-10-300 (Lumpsum) ಇದರಡಿ ಭರಿಸಲಾಗುವುದು. ತಾಲ್ಲೂಕುವಾರು ಅತಿಥಿ ಶಿಕ್ಷಕರ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲೆಯಿಂದ ಅನುದಾನ ಬೇಡಿಕೆ/ವಿವರಗಳನ್ನು ಸಲ್ಲಿಸುವುದು. ತಾಲ್ಲೂಕುವಾರು ಬೇಡಿಕೆಯನ್ನಾಧರಿಸಿ ತಾಲ್ಲೂಕು ಪಂಚಾಯತ್‌ಗಳಿಗೆ ನೇರವಾಗಿ ಆರ್ಥಿಕ ಇಲಾಖೆಯಿಂದ ಬಿಡುಡೆಯಾಗಲಿದೆ.
14. ರಜೆ ಮೀಸಲು (ರಿಸರ್ವ್ ಶಿಕ್ಷಕರ) ಹಾಜರಾತಿ ವಹಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸುವುದು ಹಾಗೂ ಯಾವ ಶಾಲೆಯಲ್ಲಿ ಕಾರ್ಯನಿರ್ವಹಣೆಗೆ ನಿಯೋಜಿಸಲಾಗಿದೆ ಎಂಬ ಬಗ್ಗೆ ಮೀಸಲು ಶಿಕ್ಷಕರ ದಿನಚರಿ (ಡೈರಿ) ಹಾಜರಾತಿ ಮತ್ತು ಇತರೆ ದಾಖಲೆಗಳನ್ನು ನಿರ್ವಹಿಸುವುದು.
15. ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ನಿಯತಕಾಲಿಕ ಶಿಕ್ಷಕರು ಹಾಜರಾಗುವವರೆಗೆ ಅಥವಾ ವರ್ಗಾವಣೆ ಆಧಾರದಲ್ಲಿ ಶಿಕ್ಷಕರು ಹಾಜರಾಗುವವರೆಗೆ ಅಥವಾ ಮಾರ್ಚ್-2020 ರವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳುವುದು. ಮೇಲಿನ ಎಲ್ಲಾ ಷರತ್ತುಗಳನ್ನು ಚಾಚು ತಪ್ಪದೇ ಪಾಲಿಸಲು ಸಂಬಂಧಿಸಿದ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಂಬಂಧಿತ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕಡ್ಡಾಯವಾಗಿ ಸೂಚಿಸಲು ಈ ಮೂಲಕ ತಿಳಿಸಿದೆ.

ಮೇಲ್ಕಂಡ ವಿಷಯದಲ್ಲಿ ಯಾವುದೇ ಲೋಪದೋಷಗಳಾದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು. ಆಯ್ಕೆ ಮಾಡಿಕೊಂಡ ಅತಿಥಿ ಶಿಕ್ಷಕರ ತಾಲ್ಲೂಕು/ವಲಯವಾರು ವಿವರಗಳನ್ನು ಜಿಲ್ಲಾ ಉಪನಿರ್ದೇಶಕರು ಕ್ರೋಢೀಕರಿಸಿ, ಗೌರವ ಸಂಭಾವನೆ ಪಾವತಿಸಲು ತಾಲ್ಲೂಕುವಾರು ಅಗತ್ಯವಿರುವ ಅನುದಾನ ಬೇಡಿಕೆ ಸಹಿತ ದೃಢೀಕೃತ ವರದಿಯ ಮುಂಗಡ ಪ್ರತಿಯನ್ನು ಸರ್ಕಾರಕ್ಕೂ ಮತ್ತು ಪ್ರತಿಯನ್ನು ಈ ಕಛೇರಿಗೆ ದಿನಾಂಕ 30/08/2019ರೊಳಗೆ ಕೆಳಗಿನ ನಮೂನೆಯಲ್ಲಿ ಮಾಹಿತಿ ಸಲ್ಲಿಸುವುದು. ವರದಿಯ ಸ್ಕ್ಯಾನ್ಡ್ ಪ್ರತಿಯನ್ನು ಇ-ಮೇಲ್ primarydpi@gmail.com ಮುಖಾತರವೂ ಈ ಕಛೇರಿಗೆ ಸಲ್ಲಿಸುವುದು

**ಜಿಲ್ಲೆಯ ಹೆಸರು :** **ಜಿಲ್ಲೆಗೆ ಹಂಚಿಕೆ ಮಾಡಿರುವ ಒಟ್ಟು ಅತಿಥಿ ಶಿಕ್ಷಕರ ಸಂಖ್ಯೆ :**

| ತಾಲ್ಲೂಕಿನ ಹೆಸರು | ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ | ಸದರಿ ಖಾಲಿ ಹುದ್ದೆಗಳಲ್ಲಿ 6 ರಿಂದ 8 ಪದವೀಧರ ಶಿಕ್ಷಕರ ನೇಮಕಾತಿಗೆ ಮೀಸಲಿಸಿರುವ ಹುದ್ದೆಗಳ ಸಂಖ್ಯೆ | ನೇಮಕಾತಿಗೆ ಮೀಸಲಿಸಿರುವ ಹುದ್ದೆಗಳ ಸಂಖ್ಯೆಯನ್ನು ಕಳೆದು ಉಳಿಕೆ ಇರುವ ಹುದ್ದೆಗಳ ಸಂಖ್ಯೆ | ತಾಲ್ಲೂಕಿಗೆ ಹಂಚಿಕೆ ಮಾಡಿರುವ ಒಟ್ಟು ಅತಿಥಿ ಶಿಕ್ಷಕರ ಸಂಖ್ಯೆ | ನಿಗದಿ ಇರುವ ಸಂಭಾವನೆ ಮೊತ್ತದ ಆಧಾರದಲ್ಲಿ ಮಾಹೆಯಾನ ಅನುದಾನದ ಲೆಕ್ಕಾಚಾರ (ರೂ ಲಕ್ಷಗಳಲ್ಲಿ) | ಒಟ್ಟು ವಾರ್ಷಿಕ ಅನುದಾನದ ಲೆಕ್ಕಾಚಾರ (ರೂ ಲಕ್ಷಗಳಲ್ಲಿ) | ಷರಾ (ಈವರೆಗಿನ ನೇಮಕಾತಿ) |
|---|---|---|---|---|---|---|---|
| | | | | | | | |

(ಎಂ.ಪಿ.ಮಾದೇಗೌಡ)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ,
ರಾಜ್ಯದ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಜಿಲ್ಲಾ ಉಪನಿರ್ದೇಶಕ ಮೂಲಕ)

ಪ್ರತಿಯನ್ನು:-
1. ಅಪ್ತ ಕಾರ್ಯದರ್ಶಿಗಳು, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಕಛೇರಿ, ವಿಧಾನ ಸೌಧ, ಬೆಂಗಳೂರು ಇವರಿಗೆ ಸಲ್ಲಿಸುತ್ತಾ, ಮನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಅಪರ ಆಯುಕ್ತರು, ಗುಲ್ಬರ್ಗಾ / ಧಾರವಾಡ, ಇವರ ಮಾಹಿತಿ ಹಾಗು ಕ್ರಮಕ್ಕಾಗಿ.
5. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಿ ಮಾಹಿತಿಗಾಗಿ ನೀಡಿದೆ.
6. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ
7. ಕಛೇರಿ ಪ್ರತಿ.

## Annexure

## Primary Guest Teachers allotment ( Year 2019 - 20 )

| Sl No | District | Total Vacancies | Notified for Recruitment 2019 ( Guest teachers till recruitment) | Remaining Vacancies ( Guest for full term) | Remarks |
|---|---|---|---|---|---|
| | Non HK | | | | |
| 1 | BENGALURU U NORTH | 339 | 102 | 237 | |
| 2 | BENGALURU U SOUTH | 678 | 152 | 526 | |
| 3 | BAGALKOT | 857 | 252 | 605 | |
| 4 | DAVANAGERE | 231 | 143 | 88 | Excluding Harapanahalli |
| 5 | DHARWAD | 398 | 166 | 232 | |
| 6 | GADAG | 304 | 135 | 169 | |
| 7 | HASSAN | 519 | 341 | 178 | |
| 8 | HAVERI | 414 | 204 | 210 | |
| 9 | KODAGU | 190 | 82 | 108 | |
| 10 | KOLAR | 198 | 198 | 0 | |
| 11 | MANDYA | 700 | 260 | 440 | |
| 12 | MYSURU | 553 | 288 | 265 | |
| 13 | BELAGAVI | 801 | 269 | 532 | |
| 14 | RAMANAGARA | 279 | 138 | 141 | |
| 15 | SHIVAMOGGA | 616 | 286 | 330 | |
| 16 | TUMAKURU | 326 | 244 | 82 | |
| 17 | TUMAKURU MADHUGIRI | 262 | 167 | 95 | |
| 18 | UDUPI | 306 | 81 | 225 | |
| 19 | UTTARA KANNADA | 134 | 134 | 0 | |
| 20 | UTTARA KANNADA SIRSI | 429 | 146 | 283 | |
| 21 | VIJAYAPURA | 1796 | 370 | 1426 | |
| 22 | BELAGAVI CHIKKODI | 1793 | 418 | 1375 | |
| 23 | BENGALURU RURAL | 221 | 142 | 79 | |
| 24 | CHAMARAJANAGARA | 377 | 127 | 250 | |
| 25 | CHIKKABALLAPURA | 329 | 178 | 151 | |
| 26 | CHIKKAMAGALURU | 95 | 47 | 48 | |
| 27 | CHITRADURGA | 322 | 285 | 37 | |
| 28 | DAKSHINA KANNADA | 739 | 202 | 537 | |
| | **Total Non HK** | | 5557 | 8748 | |
| | HK | | | 0 | |
| 29 | BALLARI | 1522 | 1085 | 437 | Including Harapanahalli |
| 30 | BIDAR | 333 | 333 | 0 | |
| 31 | KALABURGI | 1559 | 1174 | 385 | |
| 32 | KOPPAL | 1104 | 677 | 427 | |
| 33 | RAICHUR | 1591 | 996 | 595 | |
| 34 | YADAGIRI | 1835 | 743 | 1092 | |
| | **Total HK** | | 5008 | 2837 | |
| | **Total** | **22150** | **10565** | **11585** | |

Director (Primary Education)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2019–20ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 72 ಎಸ್‌ಟಿಬಿ 2016 ದಿ:13.06.2017.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ/ಪತ್ರ ಸಂಖ್ಯೆ:ಸಿ3(1) ಪ್ರಾ.ಶಿ.ಅ.ಶಿ.ನೇ.01/2019–20 ದಿನಾಂಕ:04–04–2019.

* * *

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ 2017–18ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 16,000, ಪ್ರೌಢ ಶಾಲೆಗಳಲ್ಲಿ 1,500 ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2,500 ಅತಿಥಿ ಶಿಕ್ಷಕರನ್ನು ಹೀಗೆ ಒಟ್ಟು 20,000 ಅತಿಥಿ ಶಿಕ್ಷಕರು/ಉಪನ್ಯಾಸಕರನ್ನು ಅಧಿಸೂಚಿತ ಪ್ರಾಥಮಿಕ/ಪ್ರೌಢ/ಪದವಿ ಪೂರ್ವ ಉಪನ್ಯಾಸಕರುಗಳು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾಗುವವರೆಗೆ ಅಥವಾ ಮಾರ್ಚ್.2018ರವರೆಗೆ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಗೌರವ ಸಂಭಾವನೆ ಮೇಲೆ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ಕೆಲವೊಂದು ಷರತ್ತಿಗೊಳಪಡಿಸಿ ನೇಮಕ ಮಾಡಿಕೊಳ್ಳಲು ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ವೃಂದ ಬಲ 1,88,540 ಇದ್ದು, ಪ್ರಸ್ತುತ 1,68,053 ಶಿಕ್ಷಕರು ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಸಾಲಿನ ನಿವೃತ್ತಿ ಪ್ರಕರಣಗಳಲ್ಲಿ ಗಣಿಸಿದಂತೆ ಒಟ್ಟು 24,891 ಹುದ್ದೆಗಳು ಖಾಲಿ ಇರುತ್ತವೆ. ಸದರಿ ಹುದ್ದೆಗಳಲ್ಲಿ ಈಗಾಗಲೇ 10,565 ಪದವೀಧರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಜಾರಿಯಲ್ಲಿದ್ದು, ಸದರಿ ಸಂಖ್ಯೆಯನ್ನು ಪರಿಗಣಿಸಿದಲ್ಲಿ ಮತ್ತು ವಿಶೇಷ ಶಿಕ್ಷಕರ ಹುದ್ದೆಗಳನ್ನು ಕಳೆದು ಪರಿಗಣಿಸಿದಲ್ಲಿ ಪ್ರಸ್ತುತ 19,154 ಹುದ್ದೆಗಳು ನೇಮಕಾತಿ ಲಭ್ಯವಿರುತ್ತದೆ. ಒಟ್ಟಾರೆ ಹೈದ್ರಬಾದ್ ಕರ್ನಾಟಕ ಪ್ರದೇಶದಲ್ಲಿ ಒಟ್ಟು 7,845 ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು ಹಾಗೂ ಉಳಿದಂತೆ 14,305 ಹುದ್ದೆಗಳು ಸೇರಿ 22,150 ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ಸದರಿ ಅತಿಥಿ ಶಿಕ್ಷಕರಿಗೆ ಮಾಸಿಕ ಗೌರವಧನ ರೂ.7,500/– ರಂತೆ ಒಟ್ಟು 10 ತಿಂಗಳ ಗರಿಷ್ಟ ಕಾರ್ಯನಿರ್ವಹಣಾ

ಅವಧಿಗೆ (ಜೂನ್ 2019 ರಿಂದ ಮಾರ್ಚ್ 2020) ಅವಶ್ಯವಿರುವ ರೂ.166.12 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 228 ಪಿಬಿಎಸ್ 2018; ಬೆಂಗಳೂರು,**

**ದಿನಾಂಕ:24/06/2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 2019-20ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಒಟ್ಟಾರೆ, 22,150 ಹುದ್ದೆಗಳ ಎದುರಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಲು ಈ ಕೆಳಕಂಡಂತೆ ಷರತ್ತು ಮತ್ತು ನಿಬಂಧನೆಗಳನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. 2019-20ನೇ ಸಾಲಿಗೆ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 22,150 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದೆ.

ಪ್ರಾಥಮಿಕ ಶಾಲೆಗಳಲ್ಲಿ ನೇಮಕ ಮಾಡಿಕೊಳ್ಳುವ ಅತಿಥಿ ಶಿಕ್ಷಕರಿಗೆ ಗೌರವ ಧನ ಪಾವತಿಸಲು ಬೇಕಾಗುವ ಜಿಲ್ಲಾವಾರು ಅನುದಾನದ ವಿವರಗಳನ್ನು ಒದಗಿಸಿದರೆ, ಲೆಕ್ಕ ಶೀರ್ಷಿಕೆ 2515-00-197-1-10-300 (Lumpsum)ರಡಿಯಲ್ಲಿ ಜಿಲ್ಲೆಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು.

**ಷರತ್ತುಗಳು** :-

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ ಎಲ್ಲಾ ಜಿಲ್ಲೆಗಳಲ್ಲಿ ಸಮಾನವಾಗಿ ಇಲ್ಲದಿರುವುದರಿಂದ ಮತ್ತು ಕೆಲವು ಜಿಲ್ಲೆಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡುಬಂದಿರುವುದರಿಂದ ಶಿಕ್ಷಕರನ್ನು ಮರು ಹಂಚಿಕೆ ಮಾಡಲು ತುರ್ತಾಗಿ ಕ್ರಮ ಕೈಗೊಳ್ಳುವುದು;
2. ಶಿಕ್ಷಕರ ನೇಮಕಾತಿ ಹಾಗೂ ಶಾಲಾವಾರು ಹಂಚಿಕೆ ಬಗೆಗಿನ ನೀತಿಗಳನ್ನು ಇಲಾಖೆ ಸುಧಾರಿಸುವ ಕ್ರಮವಾಗಿ ( Rationalise) ಮಾಡುವುದು.
3. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡುಬಂದಿದ್ದು, ಅವಶ್ಯಕತೆ ಇರುವ ಕಡೆ ಮರು ಹಂಚಿಕೆ ಮಾಡುವುದು.
4. ಶಿಕ್ಷಕರ ಸಂಪನ್ಮೂಲಗಳನ್ನು ಹೆಚ್ಚು ಆರ್ಥಿಕವಾಗಿ, ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
5. ಅನುದಾನಿತ ಶಾಲೆಗಳಲ್ಲಿ ಇರುವ ಹೆಚ್ಚುವರಿ ಶಿಕ್ಷಕರನ್ನು, ಕೊರತೆ ಇರುವ ಸರ್ಕಾರಿ ಶಾಲೆಗಳಲ್ಲಿ (O.O.D) ಆಧಾರದ ಮೇಲೆ ಹಂಚಿಕೆ ಮಾಡುವುದು.
6. ಕೊರತೆ ಇರುವ ಶಾಲೆಗಳಿಗೆ ಹೆಚ್ಚುವರಿ ಇರುವ ಶಾಲೆಗಳಿಂದ ಶಿಕ್ಷಕರನ್ನು ಕೂಡಲೇ ಮರು ವಿನ್ಯಾಸಿಸಲು ಕ್ರಮವಹಿಸುವುದು.

7. ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರೇ ಮಾಡುವುದು.

8. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರನ್ನು ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ನೇಮಿಸುವುದು.

9. ನೇಮಕಾತಿಗೆ ಅಧಿಸೂಚಿಸಿದ ಪ್ರಾಥಮಿಕ ಶಿಕ್ಷಕರು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾದ ತಕ್ಷಣ ಅತಿಥಿ ಶಿಕ್ಷಕರ ಹುದ್ದೆಗಳು ತಂತಾನೆ ರದ್ದಾಗುವುದು.

10. ಅತಿಥಿ ಶಿಕ್ಷಕರನ್ನು ಆಯಾ ಹುದ್ದೆಗೆ ನಿಗಧಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡುವುದು.

11. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ಗೌರವ ಧನ ಮಾಹೆಯಾನ ರೂ.7,500/–ಗಳನ್ನು ನಿಗಧಿಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 336 ವೆಚ್ಚ–8/2019. ದಿನಾಂಕ :18–06–2019ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಶಿಕ್ಷಣ ಇಲಾಖೆ (ಪ್ರಾಥಮಿಕ)

**ಇವರಿಗೆ:**

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ಆಯುಕ್ತರ ಮುಖಾಂತರ)
5. ನಿರ್ದೇಶಕರು,(ಪ್ರಾಥಮಿಕ ಶಿಕ್ಷಣ)ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಕಲಬುರಗಿ.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–7 ಮತ್ತು 8) ವಿಧಾನ ಸೌಧ.
7. ಎಲ್ಲಾ ಜಿಲ್ಲೆಗಳ ಜಿಲ್ಲಾಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು(ಆಯುಕ್ತರ ಮುಖಾಂತರ)
8. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, (ಆಯುಕ್ತರ ಮುಖಾಂತರ)
9. ಮಾಹಿತಿ ಕೇಂದ್ರಕ್ಕೆ(ಅಂತರ್ ಜಾಲದಲ್ಲಿ ಪ್ರಕಟಿಸಲು)
10. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು